# ಕರ್ನಾಟಕ ವಿಧಾನ ಪರಿಷತ್

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 473 |
| ಸದಸ್ಯರ ಹೆಸರು | : | ಶ್ರೀಮತಿ ಎಸ್.ವೀಣಾ ಅಚ್ಚಯ್ಯ (ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸುವ ಸಚಿವರು | : | ಮಾನ್ಯ ಮುಖ್ಯಮಂತ್ರಿಗಳು |
| ಉತ್ತರಿಸಬೇಕಾದ ದಿನಾಂಕ | : | 10.12.2020 |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಮಾನ್ಯ ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ಯೋಜನೆಯಡಿ 2019-20ನೇ ಸಾಲಿಗೆ ಸರ್ಕಾರ ಸೂಚಿಸಿರುವಂತೆ ರೂ.2.00 ಕೋಟಿ ರೂಪಾಯಿ ಮೊತ್ತದ ಕಾಮಗಾರಿಗಳ ಕ್ರಿಯಾ ಯೋಜನೆಯನ್ನು ಈಗಾಗಲೇ ಸಲ್ಲಿಸಿರುವ ಮಾನ್ಯ ಎಲ್ಲಾ ಶಾಸಕರುಗಳು ಸೂಚಿಸಿರುವ ಎಲ್ಲಾ ಕಾಮಗಾರಿಗಳಿಗೆ ಒಟ್ಟು ರೂ.2.00 ಕೋಟಿ ರೂಪಾಯಿ ಅನುದಾನವನ್ನು ನೀಡಲಾಗಿದೆಯೇ; | 2019-20ನೇ ಸಾಲಿನಲ್ಲಿ ಈ ಯೋಜನೆಯ ಮಾರ್ಗಸೂಚಿಯಂತೆ ಪ್ರತಿ ಕ್ಷೇತ್ರದಲ್ಲಿ ರೂ.2.00 ಕೋಟಿಗಳಿಗೆ ಕ್ರಿಯಾ ಯೋಜನೆಯನ್ನು ರೂಪಿಸಲು ತಿಳಿಸಲಾಗಿರುತ್ತದೆ.<br><br>ದಿನಾಂಕ:01.04.2019ರ ಅಂತ್ಯಕ್ಕೆ ಜಿಲ್ಲಾಧಿಕಾರಿಗಳ ಪಿ.ಡಿ.ಖಾತೆಯಲ್ಲಿ ರೂ.948.97 ಕೋಟಿಗಳು ಲಭ್ಯವಿದ್ದು, ಸದರಿ ಕಾಮಗಾರಿಗಳಿಗೆ ಜಿಲ್ಲಾಧಿಕಾರಿಗಳ ಮಟ್ಟದಲ್ಲಿ ಅನುಮೋದನೆ ನೀಡಬಹುದಾಗಿದೆ. |
| ಆ) | ಇದುವರೆಗೂ ರೂ.2.00 ಕೋಟಿ ರೂಪಾಯಿ ಮೊತ್ತದ ಕಾಮಗಾರಿಗಳ ಕ್ರಿಯಾ ಯೋಜನೆಯನ್ನು ಸಲ್ಲಿಸಿ, ಈಗಾಗಲೇ ಮಾನ್ಯ ಶಾಸಕರುಗಳು ಸೂಚಿಸಿರುವ ಹಲವಾರು ಕಾಮಗಾರಿಗಳಿಗೆ ಇದುವರೆಗೂ ಅನುದಾನ ಒದಗಿಸದಿರಲು ಕಾರಣಗಳೇನು; | ಈ ಬಗ್ಗೆ ಜಿಲ್ಲಾಧಿಕಾರಿಗಳ ಪಿ.ಡಿ.ಖಾತೆಯಲ್ಲಿ ದಿನಾಂಕ:01.04.2019ರ ಅಂತ್ಯಕ್ಕೆ ರೂ.948.97 ಕೋಟಿಗಳು ಲಭ್ಯವಿದ್ದು, ರೂ.2.00 ಕೋಟಿಯಂತೆ 2019-20ರ ಪ್ರಸ್ತಾವನೆಗಳನ್ನು ಅನುಮೋದನೆ ನೀಡಲು ಜಿಲ್ಲಾಧಿಕಾರಿಗಳಿಗೆ ಸೂಚಿಸಲಾಗಿದೆ. |
| ಇ) | 2019-20ನೇ ಸಾಲಿಗೆ ಮಾನ್ಯ ಶಾಸಕರು ನೀಡಿರುವ ರೂ.2.00 ಕೋಟಿ ರೂಪಾಯಿ ಮೊತ್ತದ ಅನುದಾನವನ್ನು ಯಾವಾಗ ನೀಡಲಾಗುವುದು; | ಆರಂಭಿಕ ಶಿಲ್ಕು ಸೇರಿ ಬಿಡುಗಡೆಯಾಗಿರುವ ಅನುದಾನದಲ್ಲಿ ಶೇ 75 ರಷ್ಟು ವೆಚ್ಚ ಭರಿಸಿದಲ್ಲಿ ಉಳಿದ ಅನುದಾನ ಬಿಡುಗಡೆ ಮಾಡಲಾಗುವುದು. |
| ಈ) | ಯಾವ ಕಾಲಮಿತಿಯೊಳಗೆ ಸದರಿ ಅನುದಾನವನ್ನು ಬಿಡುಗಡೆ ಮಾಡಲಾಗುವುದು? | ಲಭ್ಯವಿರುವ ಅನುದಾನದಲ್ಲಿ ಶೇ 75 ರಷ್ಟು ವೆಚ್ಚ ಭರಿಸಿ ಪ್ರಸ್ತಾವನೆ ಸಲ್ಲಿಸಿದರೆ ಅನುದಾನ ಬಿಡುಗಡೆ ಮಾಡಲಾಗುವುದು. |

ಸಂಖ್ಯೆ:ಪಿಡಿಎಸ್ 97 ಕೆಎಲ್ಎಸ್ 2020

(ಬಿ.ಎಸ್.ಯಡಿಯೂರಪ್ಪ)
ಮುಖ್ಯಮಂತ್ರಿ